## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.13/2023

| | | | |
|---|---|---|---|
| ಸಾಕ್ಷಿದಾರರ ಹೆಸರು | – | ಚೇತನ್ ರಾಮದಾಸ್ ರಾವ್ | ಸಿಡಬ್ಲ್ಯೂ-1 |
| ತಂದೆಯ ಹೆಸರು | – | ರಾಮದಾಸ್ | ಪಿಡಬ್ಲ್ಯೂ-1 |
| ವಯಸ್ಸು | – | 22 ವರ್ಷ | |
| ಉದ್ಯೋಗ | – | ಖಾಸಗಿ ಕೆಲಸ | |
| ವಾಸ | – | ಭೂಮ ತಾ, ಉಸ್ಮಾನಬಾದ್ ಈಗ ಧಾರಾಶಿವ್ ಜಿಲ್ಲೆ, ಮಹರಾಷ್ಟ್ರ | |

**ದಿನಾಂಕಃ07.11.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.1 ಪರಿಚಯವಿಲ್ಲ. ಮೃತ ಪಾಂಡುರಂಗ ಕ್ಷೀರಸಾಗರ ಗೊತ್ತು. ಸದರಿ ಪಾಂಡುರಂಗ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿರುತ್ತಾನೆ. ಅಂದಾಜು 1 ವರ್ಷದ ಹಿಂದೆ ನಾನು ಮತ್ತು ಪಾಂಡುರಂಗ ಇಬ್ಬರು ಸೇರಿ ಹುಂಡೈಯ್ ಕಾರ್ ನಲ್ಲಿ ನಮ್ಮ ಊರಿನಿಂದ ಚನ್ನೈಗೆ ಹೋಗುತ್ತಿದ್ದೆವು. ಆದರೆ ದಿನಾಂಕ ನಿಖರವಾಗಿ ಗೊತ್ತಿಲ್ಲ. ಸದರಿ ಕಾರನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ನಾನು ಮತ್ತು ಪಾಂಡುರಂಗ ಅದರಲ್ಲಿ ಪ್ರಯಾಣಿಸುತ್ತಿದ್ದೆವು. ರಾ.ಹೆದ್ದಾರಿ -4 ರ ಮೇಲೆ ಹಿರಿಯೂರು ದಾಟಿ ಸ್ವಲ್ಪ ದೂರ ಹೋದಾಗ ನಮ್ಮ ಕಾರ್ ಅಪಘಾತಾಕ್ಕೀಡಾಯಿತು. ನಮ್ಮ ಕಾರ್ ಚಾಲಕನು ಕಾರನ್ನು ಹೇಗೆ ಎಷ್ಟುವೇಗದಲ್ಲಿ ಚಾಲನೆ ಮಾಡುತ್ತಿದ್ದ ಎಂದು ಗೊತ್ತಿಲ್ಲ ಏಕೆಂದರೆ ಆಗ ನಾನು ನಿದ್ರೆ ಮಾಡುತ್ತಿದ್ದೆ. ಅದೇ ರೀತಿ ಅಪಘಾತ ಎಷ್ಟು ಗಂಟೆಗೆ ಆಗಿದೆ ಎಂದು ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಎಡಗಾಲಿನ ಮೂಳೆ ಮುರಿದಿದ್ದು ಪ್ರಜ್ಞೆ ತಪ್ಪಿತ್ತು. ಹಾಗಾಗಿ ಇತರೆ ಪ್ರಯಾಣಿಕರಿಗೆ ಏನು ಪೆಟ್ಟುಗಳು ಆಗಿದ್ದವು ಎಂದು ಗೊತ್ತಿಲ್ಲ. ನಾನು ಅಪಘಾತವಾದ ತಕ್ಷಣ

ಮೂರ್ಛೆ ಹೋಗಿದ್ದರಿಂದ ಪಾಂಡುರಂಗಗೆ ಎಲ್ಲಿಲ್ಲಿ ಗಾಯಗಳು ಆಗಿದ್ದವು ಎಂದು ನನಗೆ ಗೊತ್ತಿಲ್ಲ. ನಂತರ ನನಗೆ ಚಿಕಿತ್ಸೆಗಾಗಿ ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ನನಗೆ ಪ್ರಜ್ಞೆ ಬಂದಿತ್ತು.

ಸಾಕ್ಷಿಯು ಲಿಖಿತ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ದಾಖಲೆಯನ್ನು ನಿಪಿ-1 ಎಂದು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಆಸ್ಪತ್ರೆಯಲ್ಲಿ ಸಹಿ ಮಾಡಿದ್ದೇನೆ. ಸದರಿ ದಾಖಲೆಗೆ ಯಾವಾಗ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಆದರೆ ಅಪಘಾತದ ನಂತರ ಆಸ್ಪತ್ರೆಯಲ್ಲಿ ಸಹಿಮಾಡಿದ್ದೇನೆ. ನಾನು ನಿಪಿ-1 ಕ್ಕೆ ಸಹಿ ಮಾಡುವಾಗ ಅದರಲ್ಲಿ ಏನು ಬರೆದಿರಲಿಲ್ಲ ಅದು ಬಿಳಿ ಹಾಳೆಯಾಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ03.08.2022 ರಂದು ಸಂಜೆ 5 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಸ್ನೇಹಿತ ಕ್ಷೀರಸಾಗರ್, ವಿಶ್ವಾಂಬರ್, ಕ್ಷಷ್ಣಾವತ್ ಹಾಗೂ ಸಂಬಂಧಿಕರಾದ ಪಾಂಡುರಂಗ ಕ್ಷೀರಸಾಗರ್ ರವರ ವಿಶ್ವಂಬರ್ ರವರ ಬಾಬ್ತು ಕಾರ್ ನಂ.ಎಂ ಹೆಚ್ .45. ಎಲ್.6367 ರಲ್ಲಿ ನಮ್ಮ ಗ್ರಾಮದಿಂದ ಹೊರಟು ರಾ.ಹೆದ್ದಾರಿ-4 ರ ಮಾರ್ಗವಾಗಿ ದಿಃ04.08.2022 ರಂದು ಬೆಳಗ್ಗೆ 5.20 ಕ್ಕೆ ಹಿರಿಯೂರು ತಾಲೂಕಿನ ಆನೆ ಸಿದ್ರಿ ಗೇಟ್ ಬಳಿ ಹೋಗುತ್ತಿದ್ದೆವು ಎಂದರೆ ನಿಜ. ಸದರಿ ಕಾರ್ ನ್ಯಾಯಾಲಯದ ಮುಂದಿರುವ ಆರೋಪಿ ಕೃಷ್ಣಾವತ್ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿ ಸದರಿ ಕಾರನ್ನು ಹೆದ್ದಾರಿ ಮೇಲೆ ಅತಿವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿ ರಸ್ತೆ ಡಿವೈಡರ್ ಗೆ ಅಪಘಾತ ಪಡಿಸಿದ್ದಾನೆ ಎಂದರೆ ಸರಿಯಲ್ಲ. ಸಾಕ್ಷಿಯು ತಾನು ಆ ಸಮಯದಲ್ಲಿ ಮಲಗಿದ್ದೆ ಎಂದು ಹೇಳುತ್ತಾರೆ. ಸದರಿ ಅಪಘಾತದಲ್ಲಿ

ಪಾಂಡರುಗಂಗೆ ತಲೆಗೆ ತೀವ್ರ ಪೆಟ್ಟಾಗಿ ಸ್ಥಳದಲ್ಲಿ ಮೃತ ಪಟ್ಟ ಎಂದರೆ ಸರಿಯಲ್ಲ. ಸದರಿ ಅಪಘಾತ ವು ಆರೋಪಿ ಯ ಅತಿವೇಗ ಮತ್ತು ನಿರ್ಲಕ್ಷತನ ಕಾರ್ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದ ನಿಪಿ–1 ರಂತೆ ಅಪಘಾತದ ಬಗ್ಗೆ ನಾನು ಕೊಟ್ಟ ಮಾಹಿತಿಯಂತೆ ಬರೆದು ಆಸ್ಪತ್ರೆಯಲ್ಲಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಅಪಘಾತದ ಬಗ್ಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ವೈ ಆರ್ ಕೆ ವಕೀಲರಿಂದ–ಏನೂ ಇಲ್ಲ.**

{ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹಿಂದಿ ಭಾಷೆಯಲ್ಲಿ ಹೇಳಿದ ಹೇಳಿಕೆಯನ್ನು ಶ್ರೀ ಎಸ್ ಎಂ ಆರ್ ವಕೀಲರ ಮುಖಾಂತರ ಕನ್ನಡದಲ್ಲಿ ಅನುವಾದಿಸಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು